ISSN: 2581-8511
Tumbe Group of International Journals
A Multidisciplinary Journal
Issue-2
Volume-1
May-Aug: 2018

# ಪ್ರಜಾಪ್ರಭುತ್ವ ಆಡಳಿತದ ಪಾರದರ್ಶಕತೆಗೆ ಮಾಹಿತಿ ಹಕ್ಕು ಕಾಯ್ದೆ – 2005

**ಡಾ. ನಾರಾಯಣಪ್ಪ ಎನ್.ಕೆ.**

ರಾಜ್ಯಶಾಸ್ತ್ರ ವಿಭಾಗ,

ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳಾಗಿರುವುದರಿಂದ ಪ್ರಜೆಗಳಿಗೆ ಮಾಹಿತಿ ಬಹುಮುಖ್ಯವಾಗಿ ಬೇಕಾಗುತ್ತದೆ. ಏಕೆಂದರೆ ಮಾಹಿತಿಯು ಪ್ರಜಾಪ್ರಭುತ್ವದ ಆಡಳಿತದ ಪಾರದರ್ಶಕತೆ ಹಾಗೂ ಸಮಾಜದ ಭ್ರಷ್ಟಾಚಾರ ನಿಯಂತ್ರಿಸಲು ಮಾಹಿತಿ ಹಕ್ಕು ಅತ್ಯವಶ್ಯಕವಾಗಿದೆ. ಪ್ರಜಾಪ್ರಭುತ್ವದ ಕಲ್ಯಾಣ ಸರ್ಕಾರದ ಯೋಜನೆಗಳ ಮೇಲೆ ಅವಲಂಬಿತವಾಗಿರುತ್ತದೆ. ಇಂತಹ ಯೋಜನೆಗಳ ಬಗ್ಗೆ ಅಧಿಕಾರಿಗಳಿಗೆ ಸ್ಪಷ್ಟವಾದ ಮಾಹಿತಿಯು ಇದ್ದು ಸರ್ಕಾರದ ಯೋಜನೆಗಳನ್ನು ಅಧಿಕಾರಿಗಳು ನಿಯಮ ಬದ್ಧವಾಗಿ ಇಚ್ಛಾಶಕ್ತಿಯಿಂದ ಅನುಷ್ಠಾನಗೊಳಿಸಬೇಕು. ಆಗ ಯೋಜನೆಗಳು ಫಲಪ್ರದವಾಗುತ್ತವೆ. ಎಷ್ಟೋ ಪ್ರಜೆಗಳಿಗೆ ಸರ್ಕಾರದ ಯೋಜನೆಗಳಾವುವು, ಅವುಗಳ ಉದ್ದೇಶವೇನೆಂಬುದು ಗೊತ್ತೇ ಇರುವುದಿಲ್ಲ. ಆದ್ದರಿಂದ ಮಾಹಿತಿ ಪಡೆಯುವುದು ಪ್ರತಿಯೊಬ್ಬ ಪ್ರಜೆಯ ಹಕ್ಕಾಗಿರುತ್ತದೆ. ಅಧಿಕಾರಿಗಳು ಕೇವಲ ಅಂಕಿ ಅಂಶಗಳ ಆಧಾರದ ಮೇಲೆ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದೇವೆಂದು ಜನರಿಗೆ ಯಾಮಾರಿಸುವುದರ ಜೊತೆಗೆ ಸುಳ್ಳು ಮಾಹಿತಿಗಳನ್ನು ನೀಡಿ ಭ್ರಷ್ಟಾಚಾರ ಎಸಗುತ್ತಾರೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಭಾಗವಹಿಸುವಿಕೆಯಿಂದ ಆಡಳಿತದಲ್ಲಿ ಗುಣಮಟ್ಟ ಹೆಚ್ಚಾಗುವುದರ ಜೊತೆಗೆ ಸಾರ್ವಜನಿಕ ಆಡಳಿತದಲ್ಲಿ ಪಾರದರ್ಶಕತೆ ಕಂಡುಬರುತ್ತದೆ.

ಪ್ರಜೆಗಳಿಗೆ ಸರಿಯಾದ ಮಾಹಿತಿ ಇಲ್ಲದೆ ಯಾವ ವ್ಯಕ್ತಿಯು ತನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಲಾರ. ಸರ್ಕಾರದ ಮಾಹಿತಿಯು ಜನರ ಜೀವನ ಅವರ ಸ್ವಾತಂತ್ರ್ಯ ಘನತೆಯ ಮೇಲೆ ಪರಿಣಾಮ ಬೀರುತ್ತದೆ. ಮಾಹಿತಿ ಹಕ್ಕು ಸರ್ವೋಚ್ಚವಾದದ್ದು. ಆದ್ದರಿಂದ ಸರ್ವೋಚ್ಚ ನ್ಯಾಯಾಲಯವು ಮಾಹಿತಿ ಹಕ್ಕನ್ನು ವ್ಯಕ್ತಿಯ ಜೀವನದ ಭಾಗ ಎಂದು ಸ್ಪಷ್ಟಪಡಿಸಿದೆ. ಇತ್ತೀಚೆಗೆ ನಮ್ಮ ರಾಷ್ಟ್ರದಲ್ಲಿ ಅಧಿಕಾರಿಗಳಿಂದ ಮಾಹಿತಿ ಪಡೆಯಲು ಜನರ ಹೋರಾಟ ಇತ್ತೀಚೆಗೆ ಬಲವಾಗಿ ಬೆಳೆಯುತ್ತಿದೆ. ಮಾಹಿತಿ ಪಡೆಯಲು ಹಲವಾರು ಸಂಘ ಸಂಸ್ಥೆಗಳು ರಾಷ್ಟ್ರೀಕೃತ ಕಾರ್ಯಾಚರಣೆಯನ್ನು ನಡೆಸುತ್ತಿವೆ ಹಾಗಾಗಿ ಭಾರತದ ಸಂಸತ್ತು ಜೂನ್ 15, 2005 ರಲ್ಲಿ ಮಾಹಿತಿ ಹಕ್ಕನ್ನು ಜಾರಿಗೆ ತಂದಿದೆ. ಆದ್ದರಿಂದ ಯಾವುದೇ ಪ್ರಜೆಯು ಮಾಹಿತಿಯನ್ನು ಕೇಳಿದಾಗ ಸರ್ಕಾರ ಅಥವಾ ಅಧಿಕಾರಿಗಳು ಮಾಹಿತಿಯನ್ನು ಒದಗಿಸುವುದು ಅವರ ಕರ್ತವ್ಯವಾಗಿರುತ್ತದೆ.

ಸಾರ್ವಜನಿಕ ಅಧಿಕಾರಿಗಳ ನಿಯಂತ್ರಣದಲ್ಲಿರುವ ಮಾಹಿತಿಯನ್ನು ಪಡೆದುಕೊಳ್ಳಲು ಜನಸಾಮಾನ್ಯರಿಗೆ ಅನುವಾಗುವಂತೆ ಈ ಕಾಯಿದೆಯನ್ನು ಭಾರತ ಸರ್ಕಾರ ಜಾರಿಗೊಳಿಸಿದೆ. ಪ್ರತಿಯೊಬ್ಬ ಸಾರ್ವಜನಿಕ ಅಧಿಕಾರಿಯೂ ಜವಾಬ್ದಾರಿಯುತವಾಗಿ ಹಾಗೂ ಪಾರದರ್ಶಕವಾಗಿ ಕೆಲಸ ಮಾಡಬೇಕೆನ್ನುವುದು ಇದರ ಉದ್ದೇಶ. ಈ ಕಾಯ್ದೆಯು ಕೇಂದ್ರ ಮತ್ತು ರಾಜ್ಯ ಮಾಹಿತಿ ಹಕ್ಕಿನ ಆಯೋಗಗಳನ್ನು ರಚಿಸುತ್ತದೆ.

**ಮಾಹಿತಿ ಹಕ್ಕು ಕಾಯ್ದೆಯ ಲಕ್ಷಣಗಳು:**

ಸೆಕ್ಷನ್ 1ರ ಪ್ರಕಾರ ಜಮ್ಮು ಕಾಶ್ಮೀರವನ್ನು ಬಿಟ್ಟು ಇಡೀ ಭಾರತಕ್ಕೆ ಈ ಕಾಯ್ದೆ ಅನ್ವಯವಾಗುತ್ತದೆ. ಇದು ಎಲ್ಲಾ ಸಾರ್ವಜನಿಕ ಖಾಸಗಿ ಅಧಿಕಾರಗಳನ್ನು ಒಳಗೊಳ್ಳುತ್ತದೆ.

ಸೆಕ್ಷನ್ 2(ಎ) ಪ್ರಕಾರ "ಚಿಠಿಠಿಡಿoಠಿಡಿiಚಿಣe goveಡಿಟimeಟಿಣ"ಪದಗಳಿಗೆ ಅರ್ಥವನ್ನು ಕೊಡಲಾಗಿದೆ.

ಸೆಕ್ಷನ್ 2(ಇ) ಕಾನೂನು ಬದ್ಧ ಅಧಿಕಾರಿ ಎಂಬ ಪದಕ್ಕೆ ಅರ್ಥ ನೀಡಲಾಗಿದೆ. ಲೋಕಸಭೆ ಮತ್ತು ವಿಧಾನಸಭೆಗಳ ಸಭಾಪತಿಗಳು, ರಾಜ್ಯಸಭೆ ಮತ್ತು ವಿಧಾನ ಪರಿಷತ್ತುಗಳ ಮುಖ್ಯಸ್ಥರುಗಳು ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ಮುಖ್ಯ ನ್ಯಾಯಾಧೀಶರುಗಳು, ರಾಷ್ಟ್ರಪತಿ, ರಾಜ್ಯಪಾಲರು ಸಂವಿಧಾನದ ಅಡಿಯಲ್ಲಿ ಬರುವ ಇತರೆ ಅಧಿಕಾರಿಗಳು. ಇವರುಗಳು ಕಾನೂನು ಬದ್ಧ ಅಧಿಕಾರಿಗಳಾಗಿರುತ್ತಾರೆ.

ಸೆಕ್ಷನ್ 2(ಹೆಚ್) "ಪಬ್ಲಿಕ್ ಅಥಾರಿಟಿ"ಗೆ ಅರ್ಥವನ್ನು ನೀಡಲಾಗಿದೆ.

ಸೆಕ್ಷನ್ 2(ಎಫ್) "ಮಾಹಿತಿ" ಪದಕ್ಕೆ ಅರ್ಥವನ್ನು ಕೊಡಲಾಗಿದೆ. ಮಾಹಿತಿ ಎಂದರೆ, ಯಾವುದೇ ವಿಷಯ, ರೆಕಾರ್ಡ್‍ಗಳು, ದಾಖಲೆಗಳು, ಮೆಮೋಗಳು, ಇ-ಮೇಲ್‍ಗಳು, ಅಭಿಪ್ರಾಯಗಳು, ಸಲಹೆಗಳು, ಪತ್ರಿಕಾ ಹೇಳಿಕೆಗಳು, ಸುತ್ತೋಲೆಗಳು, ಆದೇಶಗಳು, ಒಪ್ಪಂದಗಳು, ವರದಿಗಳು, ಪೇಪರ್‍ಗಳು, ಸ್ಯಾಂಪಲ್‍ಗಳು ಮತ್ತು ಸುದ್ದಿ ಸಂಗ್ರಹ ಮಾಹಿತಿ ಅರ್ಥಕ್ಕೆ ಒಳಪಡುತ್ತವೆ.

ಸೆಕ್ಷನ್ 2(ಐ) ಪ್ರಕಾರ "ರೆಕಾರ್ಡ್" ಎಂಬ ಪದದ ಅರ್ಥವನ್ನು ಹೇಳುತ್ತದೆ. ಯಾವುದೇ ದಾಖಲೆ, ಅಸ್ತಪ್ರತಿ ಮತ್ತು ಕಡತ ಯಾವುದೇ ಮೈಕ್ರೋಫಿಲಂ ಮತ್ತು ದಾಖಲೆ ಹಸ್ತಪ್ರತಿ, ಕಂಪ್ಯೂಟರ್, ಯಾವುದೇ ನಮೂನೆಯಲ್ಲಿ ದೊರೆಯುವ ಮಾಹಿತಿಗಳು.

"ಮಾಹಿತಿಹಕ್ಕು" ಎಂಬ ಪದದ ಅರ್ಥವನ್ನು ಸೆಕ್ಷನ್ 2(ಐ) ನಲ್ಲಿ ಕಾಣಬಹುದು. ಇಲ್ಲಿ ಕೆಲಸ, ದಾಖಲೆ, ರೆಕಾರ್ಡ್‍ಗಳ ಪರಿಶೀಲನೆ, ಟಿಪ್ಪಣಿ ಬರೆದುಕೊಳ್ಳುವುದು ಮತ್ತು ದಾಖಲೆಗಳ ದೃಢೀಕರಣ ಪ್ರತಿಗಳನ್ನು ಪಡೆಯುವುದು.

**ಸಾರ್ವಜನಿಕ ಅಧಿಕಾರಿಗಳ ಜವಾಬ್ದಾರಿ**

ದೇಶದ ಎಲ್ಲ ಪ್ರಜೆಗಳಿಗೂ ಮಾಹಿತಿ ಕೇಳುವ ಹಕ್ಕಿದೆ. ಸಾರ್ವಜನಿಕ ಅಧಿಕಾರಿ ವರ್ಗ ಎಲ್ಲ ದಾಖಲೆಗಳನ್ನು ಈ ಕಾಯ್ದೆಯ ಅನ್ವಯ ಮಾಹಿತಿ ಹಕ್ಕನ್ನು ಪ್ರಜೆಗಳಿಗೆ ಕೊಡಲು ಅನುಕೂಲವಾಗುವಂತೆ ಸೂಚಿಕೆಯ ಪಟ್ಟಿಯಲ್ಲಿ ನಮೂದಿಸಬೇಕು ಮತ್ತು ಎಲ್ಲಾ ದಾಖಲೆಗಳನ್ನು ಸೂಕ್ತವಾಗಿ ಸೂಕ್ತ ಸಮಯದಲ್ಲಿ ಗಣಕೀಕೃತಗೊಳಿಸಬೇಕು, ಗಣಕೀಕೃತ ದಾಖಲೆಗಳು ದೇಶವ್ಯಾಪಿ ದೊರಕುವಂತೆ ಅಂತರಜಾಲದಲ್ಲಿ ಬಿಡುಗಡೆಗೊಳಿಸಬೇಕು.

ಸಾರ್ವಜನಿಕ ಮಾಹಿತಿಯನ್ನು ಎರಡು ರೀತಿಯಲ್ಲಿ ಮಾಹಿತಿ ಪಡೆದುಕೊಳ್ಳಬಹುದು

1. ಸಾರ್ವಜನಿಕ ಅಧಿಕಾರಗಳ ಸ್ವ-ಇಚ್ಛೆಯಿಂದ ಪ್ರಕಟಿಸುವ ಮಾಹಿತಿಗಳ ಮೂಲಕ.
2. ನಿಗಧಿಪಡಿಸಿದ ಶುಲ್ಕವನ್ನು ಪಾವತಿ ಮಾಡಿ ಅರ್ಜಿ ಸಲ್ಲಿಸುವ ಮೂಲಕ.

ಅರ್ಜಿಯ ಜೊತೆಗೆ ನಿಗಧಿತ ಶುಲ್ಕ 10 ರೂಪಾಯಿಯನ್ನು ಸಲ್ಲಿಸಬೇಕು. ಬಡತನ ರೇಖೆಯ ಕೆಳಗಿರುವವರು ಯಾವ ಶುಲ್ಕವನ್ನು ಕಟ್ಟುವ ಹಾಗಿಲ್ಲ. ತಾನು ಬಡತನ ರೇಖೆಗಿಂದ ಕೆಳಗಿದ್ದೇನೆ ಎಂದು ಪ್ರಮಾಣೀಕರಿಸಲು ಸಂಬಂಧಿಸಿದ ಅಧಿಕಾರಿಯಿಂದ ತೆಗೆದುಕೊಂಡ

ದೃಢೀಕರಣ ಪತ್ರವನ್ನು ಸಲ್ಲಿಸಬೇಕು.ಮಾಹಿತಿ ಒದಗಿಸಲು ಕಾಲಾವಕಾಶಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರವು ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಅಥವಾ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನು ನೇಮಿಸಬೇಕು. ಅರ್ಜಿ ಸಲ್ಲಿಸಿದ 30 ದಿನಗಳ ಅವಧಿಯಲ್ಲಿ ಮಾಹಿತಿ ನೀಡಬೇಕು. ವ್ಯಕ್ತಿಯ ಜೀವ ಅಥವಾ ಪ್ರಾಣೋಪಾಯಕ್ಕೆ ಸಂಬಂಧಪಟ್ಟ ಮಾಹಿತಿಯಾದರೆ 48 ಗಂಟೆಯ ಅವಧಿಯಲ್ಲಿ ನೀಡಬೇಕು. ಸಹಾಯಕ ಮಾಹಿತಿ ಅಧಿಕಾರಿಗೆ ಅರ್ಜಿ ಸಲ್ಲಿಸಿದ್ದರೆ 30 ದಿನಕ್ಕೆ 5 ದಿನ ಹೆಚ್ಚುವರಿ ಸೇರಿಸಿಕೊಳ್ಳಬೇಕು. ಮೂರನೇ ವ್ಯಕ್ತಿಗೆ ಸಂಬಂಧಪಟ್ಟ ಮಾಹಿತಿಯಾದರೆ, 40 ದಿನಗಳ ಅವಧಿಯಲ್ಲಿ ಮಾಹಿತಿ ನೀಡಬೇಕು. ಮೇಲೆ ಸೂಚಿಸಿರುವ ವಾಯ್ದೆಯೊಳಗೆ ಮಾಹಿತಿ ನೀಡದಿದ್ದರೆ ನಿರಾಕರಿಸಲಾಗಿದೆ ಎಂದು ಭಾವಿಸತಕ್ಕದ್ದು.

**ಮೂರನೇ ವ್ಯಕ್ತಿಗೆ ಸಂಬಂಧಪಟ್ಟ ವಿಷಯ**

ಕೆಲವು ನಿಬಂಧನೆಗಳಿಗೆ ಒಳಪಟ್ಟು ಮತ್ತೊಬ್ಬ ವ್ಯಕ್ತಿಗೆ ಸಂಬಂಧಪಟ್ಟ ಮಾಹಿತಿಯನ್ನು ನೀಡಲಾಗುತ್ತದೆ. ಗೌಪ್ಯವಾಗಿರಬೇಕಾದ ಮಾಹಿತಿ ಎಂದು ಹೇಳಿ ಆ ವ್ಯಕ್ತಿ ಇಚ್ಛಿಸಿದ್ದಲ್ಲಿ ಆ ಮಾಹಿತಿ ನೀಡುವ ಮುನ್ನ ಅವರ ಅಭಿಪ್ರಾಯ ಕೇಳಲಾಗುವುದು. ಅದಕ್ಕೆ 10 ದಿನಗಳ ಕಾಲಾವಕಾಶ ನೀಡಲಾಗುವುದು. ಕೆಲವೊಂದು ಸಂದರ್ಭದಲ್ಲಿ ಮತ್ತೊಬ್ಬರ ಬಗ್ಗೆ ಮಾಹಿತಿ ನೀಡುವುದರಿಂದ ಸಾರ್ವಜನಿಕ ಹಿತ ರಕ್ಷಿಸಿದಂತಾಗುದೆ ಎಂದಾದರೆ, ಆ ಮಾಹಿತಿಯನ್ನು ಬಹಿರಂಗಗೊಳಿಸಲಾಗುವುದು. ಮೂರನೇ ವ್ಯಕ್ತಿಗೆ ಸಂಬಂಧಿಸಿದಂತೆ ಮಾಹಿತಿಗಾಗಿ ವಿನಂತಿಸಿ ಬಂದ ಅರ್ಜಿ ಸಿಕ್ಕ ನಂತರ ಸಾರ್ವಜನಿಕ ಮಾಹಿತಿ ಅಧಿಕಾರಿಯ 5 ದಿನಗಳ ಒಳಗೆ ಮೂರನೇ ವ್ಯಕ್ತಿಗೆ ಸೂಚನೆ ಕಳುಹಿಸುತ್ತಾನೆ. ಮೂರನೇ ವ್ಯಕ್ತಿ 10 ದಿನಗಳ ಒಳಗೆ ತನ್ನ ಪ್ರತಿನಿಧಿತ್ವವನ್ನು ಕೊಡಲು ಅವಕಾಶವಿದೆ. ಮೂರನೇ ವ್ಯಕ್ತಿಗೆ ಕೊಡುವ ಪ್ರತಿನಿಧಿತ್ವದ ಆಧಾರದ ಮೇಲೆ ಅರ್ಜಿ ಸಲ್ಲಿಸಿದ ವ್ಯಕ್ತಿಗೆ ಮಾಹಿತಿ ಕೊಡಬಹುದು ಇಲ್ಲವೆ ತಿರಸ್ಕರಿಸಹುದು. ಇದಿಷ್ಟು ಅರ್ಜಿ ಸಲ್ಲಿಸಿದ 40 ದಿನದೊಳಗೆ ಮುಗಿಯಬೇಕು. ಮೂರನೇ ವ್ಯಕ್ತಿಯ ಹಿತಕ್ಕಿಂತ ಸಾರ್ವಜನಿಕ ಹಿತಾಸಕ್ತಿ ಮುಂದಾದಾಗ ಮಾಹಿತಿಯನ್ನು ತೆರೆದಿಡಬೇಕಾಗುತ್ತದೆ ಅಥವಾ ಬಹಿರಂಗ ಪಡಿಸಬೇಕಾಗುತ್ತದೆ.

**ಮಾಹಿತಿ ಹಕ್ಕು ಬಹಿರಂಗ ಪಡಿಸುವುದರಿಂದ ವಿನಾಯಿತಿ**

ಈ ಅಧಿನಿಯಮದ ಪ್ರಕಾರ ನಾಗರೀಕನಿಗೆ ಈ ಕೆಳಗಿನ ಯಾವುದೇ ಮಾಹಿತಿಯನ್ನು ನೀಡುವುದು ಕಡ್ಡಾಯವಾಗಿರತಕ್ಕದ್ದಲ್ಲ.

1) ಯಾವ ಮಾಹಿತಿಯನ್ನು ಬಹಿರಂಗ ಪಡಿಸುವುದರಿಂದ ಭಾರತದ ಸಾರ್ವಭೌಮತ್ವ ಮತ್ತು ಏಕತೆ, ರಾಷ್ಟ್ರದ ಭದ್ರತೆ ಕಾರ್ಯ ತಂತ್ರ ರಾಜ್ಯದ ವೈಜ್ಞಾನಿಕ ಅಥವಾ ಆರ್ಥಿಕ ಹಿತಾಸಕ್ತಿಗಳು ವಿದೇಶದೊಂದಿಗಿನ ಸಂಬಂಧ ಇವುಗಳ ಮೇಲೆ ಪ್ರತಿಕೂಲ ಪರಿಣಾಮವೊಂದಾಗುತ್ತದೋ ಅಥವಾ ಒಂದು ಅಪರಾಧಕ್ಕೆ ಪ್ರೇರಣೆ ನೀಡುತ್ತದೋ ಅಂತಹ ಮಾಹಿತಿ.

2) ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧೀಕರಣವು ಯಾವ ಮಾಹಿತಿಯ ಪ್ರಕಟಣೆಯನ್ನು ಸ್ಪಷ್ಟವಾಗಿ ನಿಷೇಧಿಸಿದೆಯೋ ಅಥವಾ ಯಾವ ಮಾಹಿತಿಯನ್ನು ಬಹಿರಂಗಪಡಿಸುವುದರಿಂದ ನ್ಯಾಯಾಲಯ ನಿಂದನೆಯಾಗಬಹುದೋ ಅಂತಹ ಮಾಹಿತಿ.

3) ಯಾವ ಮಾಹಿತಿಯನ್ನು ಬಹಿರಂಗ ಪಡಿಸುವುದರಿಂದ ಸಂಸತ್ತು ಅಥವಾ ರಾಜ್ಯ ವಿಧಾನ ಮಂಡಲದ ಹಕ್ಕುಚ್ಯುತಿ ಉಂಟಾಗುವುದೋ ಅಂತಹ ಮಾಹಿತಿ.

4) ಯಾವ ಮಾಹಿತಿಯನ್ನು ಬಹಿರಂಗ ಪಡಿಸುವುದರಿಂದ ಮೂರನೇ ಪಕ್ಷಕಾರನ ಸ್ಪರ್ಧಾತ್ಮಕತೆಗೆ ತೊಂದರೆಯುಂಟಾಗುತ್ತದೋ ಅಂಥ ವಾಣಿಜ್ಯ ರಹಸ್ಯ, ವ್ಯಾಪಾರ ಗೌಪ್ಯತೆಗಳು ಅಥವಾ ಬೌದ್ಧಿಕ ಆಸ್ತಿಯನ್ನೊಳಗೊಂಡ ಮಾಹಿತಿ, ಅಂತಹ ಮಾಹಿತಿಯನ್ನು ಬಹಿರಂಗಪಡಿಸುವುದು ಬಹುಸಂಖ್ಯೆಯ ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯವೆಂದು ಸಮಕ್ಷಮ ಪ್ರಾಧಿಕಾರಿಗೆ ಮನದಟ್ಟಾಗುವ ಹೊರತು.

5) ವಿದೇಶಿ ಸರ್ಕಾರದಿಂದ ರಹಸ್ಯವಾಗಿ ಪಡೆದ ಮಾಹಿತಿ.

6) ಯಾವ ಮಾಹಿತಿಯನ್ನು ಬಹಿರಂಗ ಪಡಿಸುವುದರಿಂದ ಯಾರೇ ವ್ಯಕ್ತಿಯ ಜೀವ ಅಥವಾ ದೈಹಿಕ ಸುರಕ್ಷತೆಗೆ ಅಪಾಯ ಉಂಟಾಗುತ್ತದೋ ಅಂತಹ ಮಾಹಿತಿ ಕಾನೂನು ಜಾರಿಯ ಅಥವಾ ಭದ್ರತೆಯ ಉದ್ದೇಶಗಳಿಗಾಗಿ ನೀಡಿದ ಮಾಹಿತಿಯ ಅಥವಾ ಸಹಾಯದ ಮೂಲವನ್ನು ಗುರುತಿಸಬಹುದಾದಂತಹ ಮಾಹಿತಿ.

7) ತನಿಖೆ ಕ್ರಮಕ್ಕೆ ಅಥವಾ ಅಪರಾಧಿಗಳ ದಸ್ತಗಿರಿಗೆ ಅಥವಾ ಸಹಾಯದ ಮೂಲವನ್ನು ಗುರುತಿಸಬಹುದಾದಂತಹ ಮಾಹಿತಿ.

8) ಮಂತ್ರಿ ಪರಿಷತ್ತಿನ ಕಾರ್ಯದರ್ಶಿಗಳ ಮತ್ತು ಇತರ ಅಧಿಕಾರಿಗಳ ಚರ್ಚೆಗಳ ದಾಖಲೆಗಳು ಸೇರಿದಂತೆ ಸಚಿವ ಸಂಪುಟದ ಕಾಗದ ಪತ್ರಗಳು.

9) ಸಂದರ್ಭಾನುಸಾರ, ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿ ಅಥವಾ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ ಅಥವಾ ಅಪೀಲು ಪ್ರಾಧಿಕಾರಿಗೆ ಅಂಥ ಮಾಹಿತಿಯನ್ನು ಬಹಿರಂಗ ಪಡಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ನ್ಯಾಯಸಮ್ಮತವಲ್ಲವೆಂದು ಗೊತ್ತಾದರೆ ಅಂತಹ ಮಾಹಿತಿಯನ್ನು ಬಹಿರಂಗಪಡಿಸುವಂತಿಲ್ಲ.

ಮಾಹಿತಿ ಹಕ್ಕು ಕಾಯ್ದೆಯ ಉಪಯೋಗಗಳು

1) ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಸರ್ಕಾರದ ಕೆಲಸ ಕಾರ್ಯಗಳ ಮೇಲೆ ಪ್ರಜೆಗಳು ನಿಗಾ ಇಡಲು ಈ ಕಾಯ್ದೆ ಉಪಯುಕ್ತವಾಗಿದೆ.

2) ಭಾರತ ಇಂದು ಭ್ರಷ್ಟಾಚಾರವನ್ನು ನಿಯಂತ್ರಿಸಲು ವಿವಿಧ ಕಾನೂನುಗಳು ಅನುಷ್ಠಾನಗೊಳಿಸಿದ್ದರೂ ಸಾಧ್ಯವಾಗಿಲ್ಲ. ಈ ಕಾಯ್ದೆ ಜಾರಿಗೆ ಬಂದ ಮೇಲೆ ಸಾರ್ವಜನಿಕ ಕ್ಷೇತ್ರದಲ್ಲಿ ಅನೇಕ ಭ್ರಷ್ಟ ಅಧಿಕಾರಿಗಳನ್ನು ಮತ್ತು ಭ್ರಷ್ಟ ರಾಜಕಾರಣಿಗಳನ್ನು ಪತ್ತೆ ಹಚ್ಚಲಾಗಿದೆ. ಅಲ್ಲದೆ, ಅನೇಕ ರಾಜಕೀಯ ಹಾಗೂ ಆಡಳಿತ ಹಗರಣಗಳು ಬಹಿರಂಗಗೊಂಡಿವೆ.

3) ಸಾರ್ವಜನಿಕ ಆಡಳಿತದಲ್ಲಿ ಅನ್ಯಾಯ, ಶೋಷಣೆ, ತುಳಿತ ಹಾಗೂ ಇತರ ಸಂಕಷ್ಟಗಳಿಗೆ ಒಳಗಾದವರಿಗೆ ಮಾಹಿತಿ ಹಕ್ಕು ಕಾಯ್ದೆ ಒಂದು ಅಸ್ತ್ರವಾಗಿದೆ. ಇದರ ಸಹಾಯದಿಂದ ತಮ್ಮ ಹಕ್ಕುಗಳನ್ನು ಅನುಭವಿಸಲು ಮತ್ತು ಬರಬೇಕಾದ್ದನ್ನು ಪಡೆಯಲು ಸಾಧ್ಯವಾಗಿದೆ.

4) ನಾಗರೀಕ ಸಮಾಜದ ಸಂಘಟನೆಗಳು, ಮಾಧ್ಯಮಗಳು ಹಾಗೂ ಆರ್.ಟಿ.ಐ. ಹೋರಾಟಗಾರರು ಈ ಕಾಯ್ದೆಯ ಬಗ್ಗೆ ಹೆಚ್ಚು ಅರಿವನ್ನು ಜನರಲ್ಲಿ ಮೂಡಿಸಿ, ಅದರ ಪರಿಣಾಮಕಾರಿ ಅನುಷ್ಠಾನಕ್ಕೆ ಹೋರಾಡುತ್ತಿವೆ.

5) ಸಾರ್ವಜನಿಕ ಅಧಿಕಾರಿಗಳು, ಚುನಾಯಿತ ಜನಪ್ರತಿನಿಧಿಗಳು ಮತ್ತು ಸಚಿವರು ತಮ್ಮ ಅಧಿಕಾರವನ್ನು ಸ್ವಾರ್ಥಕ್ಕಾಗಿ ಅಥವಾ ಕಾನೂನು ಬಾಹಿರವಾಗಿ ಚಲಾಯಿಸಿದಾಗ ಅವರನ್ನು ಪತ್ತೆಹಚ್ಚಲು ಇದು ಉಪಯುಕ್ತವಾಗಿದೆ.

6) ಈ ಕಾಯ್ದೆಯ ಸೆಕ್ಷನ್ 4(2)ರ ಅನ್ವಯ ಎಲ್ಲಾ 'ಪಬ್ಲಿಕ್ ಅಥಾರಿಟಿಗಳು' ಆಗಾಗ್ಗೆ ಸಾರ್ವಜನಿಕರಿಗೆ ಮಾಹಿತಿಯನ್ನು ವಿವಿಧ ಸಂಪರ್ಕ ಸಾಧನಗಳ ಮೂಲಕ ಒದಗಿಸಬೇಕು. ಈ ಮಾಹಿತಿ ಆಯೋಗದ ಅಭಿಪ್ರಾಯದಲ್ಲಿ ಸರ್ಕಾರದಿಂದ ರಚಿಸಲ್ಪಟ್ಟ ಎಲ್ಲಾ ತಜ್ಞರ ಸಮಿತಿಗಳ ಮತ್ತು ಆಯೋಗಗಳ ವರದಿಗಳನ್ನು ಪ್ರಕಟಿಸಬೇಕು.

ಆರ್.ಟಿ.ಐ. ಅರ್ಜಿಗೆ ಪದಮಿತಿಯನ್ನು ಕೇಂದ್ರ ಸರ್ಕಾರ 2012ರ ಆಗಸ್ಟ್‌ನಲ್ಲಿ ಜಾರಿಗೊಳಿಸಿದೆ. 500 ಪದಗಳ ಮಿತಿಯನ್ನು ಹೇರಿದೆ. ಮೊದಲು ಯಾವುದೇ ಪದಮಿತಿ ಇರಲಿಲ್ಲ. ಆದಾಗ್ಯೂ 500ಕ್ಕಿಂತಲೂ ಹೆಚ್ಚಿನ ಪದಗಳಿರುವ ಅರ್ಜಿಯನ್ನು ತಿರಸ್ಕರಿಸುವುದಿಲ್ಲ ಎಂದು ತಿದ್ದುಪಡಿ ನಿಯಮದಲ್ಲಿ ತಿಳಿಸಲಾಗಿದೆ. ಅಲ್ಲದೆ, ಕೇಂದ್ರ ಮಾಹಿತಿ ಆಯೋಗಕ್ಕೆ ಸಲ್ಲಿಸಲಾಗುವ ಅರ್ಜಿಗಳ ನಮೂನೆಯಲ್ಲೂ ಬದಲಾವಣೆ ಮಾಡಲಾಗಿದೆ. ಅರ್ಜಿದಾರರು ಮುಖತಃ ಅಥವಾ ವಿಡಿಯೋ ಕಾನ್ಫರೆನ್ಸ್ ಮೂಲಕ ಸಿ.ಐ.ಎಸ್. ಎದುರು ಹಾಜರಾಗುವುದನ್ನು ಕಡ್ಡಾಯಗೊಳಿಸಲಾಗಿದೆ.

ಮಾಹಿತಿ ಒದಗಿಸಲು ಅಧಿಕಾರಿ ವಿಫಲತೆ

ಮಾಹಿತಿಗಾಗಿ ಬಂದಂತ ವಿನಂತಿಯನ್ನು ನಿರಾಕರಿಸಿದರೆ, ಸಮರ್ಥ ಅಧಿಕಾರಿಯು ನಿರಾಕರಣೆಗೆ ಕಾರಣಗಳನ್ನು ಕೊಟ್ಟು, ತಾನು ಮಾಡಿದ ನಿರ್ಧಾರಕ್ಕೆ ವಿರುದ್ಧವಾಗಿ ಮೇಲ್ಮನವಿಗೆ ಹೋಗಲು ಅವಕಾಶ ನೀಡಬೇಕು.

ಮೇಲ್ಮನವಿಗಳು

ಮಾಹಿತಿ ಹಕ್ಕು ಕಾಯ್ದೆಯು ಎರಡು ಹಂತದ ಮೇಲ್ಮನವಿಯನ್ನು ಒಳಗೊಂಡಿದೆ.

ಮೊದಲನೇ ಹಂತ : ನಿರ್ಧಿಷ್ಟಪಡಿಸಲಾದ ಸಮಯದೊಳಗೆ ನಿರ್ಣಯವನ್ನು ಸ್ವೀಕರಿಸಿರುವಂಥ, ಕೇಂದ್ರ, ರಾಜ್ಯ, ಸಾರ್ವಜನಿಕ ಮಾಹಿತಿ ಅಧಿಕಾರಿಯ ನಿರ್ಣಯದಿಂದ ಯಾವುದೇ ವ್ಯಕ್ತಿಯು ನಿರ್ಣಯವನ್ನು ಸ್ವೀಕರಿಸಿದ 30 ದಿನಗಳೊಳಗೆ ಮೇಲ್ಮನವಿಯ ಪ್ರತಿಯನ್ನು ಹಿರಿಯ ದರ್ಜೆಯ ಅಧಿಕಾರಿಗೆ ಸಲ್ಲಿಸಬಹುದು.

**ಕೇಂದ್ರ ಮಾಹಿತಿ ಆಯೋಗ**

ಕೇಂದ್ರ ಸರ್ಕಾರವು ಕೇಂದ್ರ ಮಾಹಿತಿ ಆಯೋಗವನ್ನು ರಚಿಸಬೇಕೆಂದು ಸೆಕ್ಷನ್ 12(1) ರಲ್ಲಿ ತಿಳಿಸುತ್ತದೆ. ಸೆಕ್ಷನ್ (2)ರ ಪ್ರಕಾರ ಮಾಹಿತಿ ಆಯುಕ್ತರನ್ನು ಮತ್ತು ಇತರ ಕೇಂದ್ರ ಮಾಹಿತಿ ಆಯುಕ್ತರನ್ನು ನೇಮಿಸಬೇಕೆಂದು ತಿಳಿಸುತ್ತದೆ. ಸೆಕ್ಷನ್ (3)ರ ಪ್ರಕಾರ ಮಾಹಿತಿ ಆಯುಕ್ತರನ್ನು ಸಮಿತಿಯ ಸಲಹೆಯ ಮೇರೆಗೆ ರಾಷ್ಟ್ರಪತಿ ನೇಮಿಸುತ್ತಾರೆ. ಶಿಫಾರಸ್ಸಿನ ಸಮಿತಿಯಲ್ಲಿ ಪ್ರಧಾನ ಮಂತ್ರಿ, ಲೋಕಸಭೆ ಪ್ರತಿಯಪಕ್ಷದ ನಾಯಕ, ಕ್ಯಾಬಿನೆಟ್ ಸಚಿವರುಗಳು ಇರುತ್ತಾರೆ. ಕೇಂದ್ರ ಮಾಹಿತಿ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿರ್ವಹಣೆ ಮುಖ್ಯ ಮಾಹಿತಿ ಆಯುಕ್ತರ ಜವಾಬ್ದಾರಿಯಾಗಿರುತ್ತದೆ. ಈ ಆಯೋಗದ ಪ್ರಧಾನ ಕಛೇರಿಯು ದೆಹಲಿಯಲ್ಲಿದೆ. ಕೇಂದ್ರ ಸರ್ಕಾರದ ಅನುಮತಿ ಮೇರೆಗೆ ದೇಶದ ವಿವಿಧ ಭಾಗಗಳಲ್ಲಿ ಆಯೋಗದ ಕಛೇರಿಗಳನ್ನು ಸ್ಥಾಪಿಸಬಹುದು.

ಮಾಹಿತಿಯ ಆಯುಕ್ತರಾಗಲು ಸೆಕ್ಷನ್ 12(5)ರ ಪ್ರಕಾರ ಸಾರ್ವಜನಿಕ ಜೀವನದಲ್ಲಿ ಉತ್ತಮ ನಡವಳಿಕೆಯುಳ್ಳ ವ್ಯಕ್ತಿಯಾಗಿರಬೇಕು. ಮತ್ತು ಕಾನೂನು, ವಿಜ್ಞಾನ, ತಂತ್ರಜ್ಞಾನ, ಸಾಮಾಜಿಕ ಸೇವೆ, ಮ್ಯಾನೇಜ್ಮೆಂಟ್, ಪತ್ರಿಕೋದ್ಯಮ, ಆಡಳಿತದಲ್ಲಿ ಅಪಾರವಾದ ಜ್ಞಾನವನ್ನು ಹೊಂದಿರಬೇಕು. ಕೇಂದ್ರ ಮಾಹಿತಿ ಆಯೋಗ ಮುಖ್ಯವಾಗಿ 10 ಜನ ಮಾಹಿತಿ ಆಯುಕ್ತರನ್ನು ಒಳಗೊಂಡಿರುತ್ತದೆ. ಇವರು ಕಾನೂನು, ವಿಜ್ಞಾನ, ತಾಂತ್ರಿಕರೆ, ನಿರ್ವಹಣೆ, ಸಮಾಜಸೇವೆ, ಮುಂತಾದ ವಿಷಯಗಳಲ್ಲಿ ಅಪಾರ ಜ್ಞಾನ ಹೊಂದಿದವರಾಗಿರುತ್ತಾರೆ.

**ರಾಜ್ಯ ಮಾಹಿತಿ ಆಯೋಗ :**

ಈ ಕಾಯ್ದೆಯ ಅಧ್ಯಾಯ 4 ರಲ್ಲಿ ರಾಜ್ಯ ಮಾಹಿತಿ ಆಯೋಗದ ವಿವಿರಗಳನ್ನು ಕಾಣಬಹುದು. ಸೆಕ್ಷನ್ 15/1ರ ಪ್ರಕಾರ ಪ್ರತಿಯೊಂದು ರಾಜ್ಯ ಸರ್ಕಾರ ಮಾಹಿತಿ ಆಯೋಗವನ್ನು ರಚಿಸಿ, ಅದನ್ನು ಅಧಿಕೃತ ಗೆಜೆಟ್ನಲ್ಲಿ ಪ್ರಕಟಿಸಬೇಕು. ರಾಜ್ಯದ ಮುಖ್ಯ ಮಾಹಿತಿ ಆಯುಕ್ತರನ್ನು ರಾಜ್ಯಪಾಲರು ನೇಮಿಸುತ್ತಾರೆ. ಶಿಫಾರಸ್ಸಿನ ಸಮಿತಿಯಲ್ಲಿ ಮುಖ್ಯಮಂತ್ರಿ, ವಿಧಾನ ಸಭೆ ವಿರೋಧಪಕ್ಷದ ನಾಯಕ, ಕ್ಯಾಬಿನೆಟ್ ಸಚಿವರುಗಳು ಇರುತ್ತಾರೆ. ರಾಜ್ಯ ಮಾಹಿತಿ ಆಯೋಗದ ಪ್ರಧಾನ ಕಛೇರಿಯು ಬೆಂಗಳೂರಿನಲ್ಲಿದೆ. ಸರ್ಕಾರದ ಅನುಮತಿ ಪಡೆದು ಇತರ ಸ್ಥಳಗಳಲ್ಲಿ ತನ್ನ ಕಛೇರಿಗಳನ್ನು ರಾಜ್ಯ ಮಾಹಿತಿ ಆಯೋಗವು ಸ್ಥಾಪಿಸಬಹುದು. ಸೆಕ್ಷನ್ 15/5ರ ಪ್ರಕಾರ ರಾಜ್ಯ ಮಾಹಿತಿ ಆಯುಕ್ತರು ಉನ್ನತ ವ್ಯಕ್ತಿಯಾಗಿದ್ದು ಕಾನೂನು, ವಿಜ್ಞಾನ, ತಂತ್ರಜ್ಞಾನ, ಸಾಮಾಜಿಕ ಸೇವೆ, ಪತ್ರಿಕೋದ್ಯಮ ಹಾಗೂ ಆಡಳಿತದಲ್ಲಿ ಅಪಾರವಾದ ಜ್ಞಾನ ಮತ್ತು ಅನುಭವವನ್ನು ಪಡೆದಿರಬೇಕು. ಇವರು ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿರಬಾರದು.

**ಮಾಹಿತಿ ಆಯೋಗಗಳ ಅಧಿಕಾರಗಳು ಮತ್ತು ಕರ್ತವ್ಯಗಳು**

ಅಧ್ಯಾಯ 5 ರಲ್ಲಿ ಕೇಂದ್ರ ಮತ್ತು ರಾಜ್ಯ ಮಾಹಿತಿ ಆಯೋಗಗಳ ಅಧಿಕಾರ ಮತ್ತು ಕರ್ತವ್ಯಗಳ ಬಗ್ಗೆ ವಿವರಿಸಲಾಗಿದೆ.

ಸೆಕ್ಷನ್ 18(1)ರ ಪ್ರಕಾರ ಯಾವುದೇ ಆಯೋಗ ಯಾವುದೇ ವ್ಯಕ್ತಿಯಿಂದ ದೂರನ್ನು ಸ್ವೀಕರಿಸಬೇಕು. ದೂರಿನಲ್ಲಿ ಸಕಾರಾತ್ಮಕವಾದ ಅಂಶವಿದ್ದರೆ, ವಿಚಾರಣೆ ನಡೆಯಲು ಆಯೋಗವು ಕ್ರಮ ಕೈಗೊಳ್ಳಬೇಕು. ದೂರನ್ನು ವಿಚಾರ ಮಾಡುವಾಗ ಆಯೋಗಕ್ಕೆ ಸಿವಿಲ್ ಕೋರ್ಟಿನ ಅಧಿಕಾರವಿರುವುದರಿಂದ ವ್ಯಕ್ತಿಗಳ ಹಾಜರಾತಿಗೆ ಸಮನ್ಸ್ ನೀಡಬಹುದು. ಮತ್ತು ಅವರು ಮೌಖಿಕ ಅಥವಾ ಲಿಖಿತ ಸಾಕ್ಷವನ್ನು ಕೊಡುವಂತೆ ಕೇಳಬಹುದು. ಮತ್ತು ದಾಖಲೆಗಳನ್ನು ಪತ್ತೆ ಹಚ್ಚಬಹುದು ಮತ್ತು ಪರೀಕ್ಷಿಸಬಹುದು. ಅಫಿಡವಿಟ್ ಮೇಲೆ ಸಾಕ್ಷವನ್ನು ಪಡೆಯಬಹುದು.

ಸೆಕ್ಷನ್ 19ರ ಪ್ರಕಾರ ಅಫೀಲಿಗೆ ಸಂಬಂಧಿಸಿದ ಅಧಿಕಾರವನ್ನು ತಿಳಿಸುತ್ತದೆ. ಅರ್ಜಿದಾರನು 30 ದಿನಗಳೊಳಗೆ ಮಾಹಿತಿಯನ್ನು ಪಡೆಯದಿದ್ದರೆ, ಮಾಹಿತಿ ಬಗ್ಗೆ 30 ದಿನಗಳೊಳಗೆ ಅಫಿಲಿಯೇಟ್ ಅಥಾರಿಟಿಗೆ ಮೇಲ್ಮನವಿಯನ್ನು ಸಲ್ಲಿಸಹುದು. ನ್ಯಾಯಾಲಯಗಳ ಕಾನೂನು ಮಾಹಿತಿ ಆಯೋಗದ ನಿರ್ಧಾರದ ವಿರುದ್ಧ ವ್ಯಾಜ್ಯಗಳನ್ನು ಅನುಚ್ಛೇದ 32 ಹಾಗೂ 226ರ ಅಡಿಯಲ್ಲಿ ಕಾನೂನಿನ ಅನ್ವಯ ಸರ್ವೋಚ್ಛ ನ್ಯಾಯಾಲಯ ಹಾಗೂ ಉಚ್ಛ ನ್ಯಾಯಾಲಯ ನ್ಯಾಯ ನಿರ್ಣಯ ಮಾಡಬಹುದು.

ಕೇಂದ್ರ ಮತ್ತು ರಾಜ್ಯ ಮಾಹಿತಿ ಆಯೋಗವು ಸಾರ್ವಜನಿಕ ಅಧಿಕಾರಿಗಳು ಅರ್ಜಿಯನ್ನು ಸ್ವೀಕರಿಸಲು ನಿರಾಕರಿಸಿದರೆ, ನಿರ್ಧಿಷ್ಟ ಸಮಯದೊಳಗೆ ಮಾಹಿತಿ ಕೊಡದೆ ಇದ್ದರೆ, ಅರ್ಜಿಯನ್ನು ದುರುದ್ದೇಶದಿಂದ ನಿರಾಕರಿಸಿದರೆ, ತಪ್ಪು ಮಾಹಿತಿಗಳನ್ನು ನೀಡಿದರೆ ಅಂತಹ ಅಧಿಕಾರಿಗೆ ದಿನಕ್ಕೆ 250 ರೂಪಾಯಿಗಳಂತೆ ಗರಿಷ್ಠ 25 ಸಾವಿರ ರೂಪಾಯಿಗಳ ವರೆಗೆ ದಂಡ ವಿಧಿಸಬಹುದು.

**ಇತಿಮಿತಿಗಳು:**

ಮಾಹಿತಿ ಹಕ್ಕು ಕಾಯ್ದೆ ಪ್ರಜಾಪ್ರಭುತ್ವದ ಬುನಾದಿ ಎಂದು ಹೇಳಿದರೂ ಅದರಲ್ಲಿ ಅನೇಕ ಇತಿಮಿತಿಗಳಿವೆ. ಶೇಕಡ 15ರಷ್ಟು ಗ್ರಾಮೀಣ ಪ್ರದೇಶದವರು, ಶೇಕಡ 35ರಷ್ಟು ನಗರ ಪ್ರದೇಶದ ಜನರು ಈ ಕಾಯ್ದೆ ಬಗ್ಗೆ ತಿಳಿದಿದ್ದಾರಷ್ಟೆ. ಶೇಕಡ 15 ರಷ್ಟು ಮಹಿಳೆಯರಿಗೆ, ಶೇಕಡ 35ರಷ್ಟು ಪುರುಷರಿಗೆ ಈ ಕಾಯ್ದೆ ಬಗ್ಗೆ ಅರಿವಿದೆ. ಮಾಹಿತಿ ಅಧಿಕಾರಿಗಳ ಕಛೇರಿಗಳ ಮುಂದೆ ನಾಮಫಲಕಗಳು ಇಲ್ಲವೆಂದು ಶೇಕಡ 60ರಷ್ಟು ಮಂದಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅರ್ಜಿಗಳನ್ನು ಸಲ್ಲಿಸಲು ಕಛೇರಿಗೆ ಹಲವಾರು ಅಲೆಯಬೇಕೆಂದು ಸುಮಾರು 40 ರಷ್ಟು ಮಂದಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸುಮಾರು 90ರಷ್ಟು ಮಾಹಿತಿ ಅಧಿಕಾರಿಗಳು ಮಾಹಿತಿಗಳನ್ನು ನೀಡುವಾಗ ವಿಳಂಬ ದೋರಣೆಯನ್ನು ನೀಡಿರುತ್ತಾರೆಂದು ದೂರಿದ್ದಾರೆ. ಶೇಕಡ 50 ರಷ್ಟು ಅರ್ಜಿದಾರರು ಅರ್ಜಿ ಸಲ್ಲಿಸಿದ 30 ದಿನಗಳಲ್ಲಿ ಮಾಹಿತಿಯನ್ನು ಪಡೆಯಲು ಸಾಧ್ಯವಾಗುತ್ತಿಲ್ಲವೆಂದು ದೂರಿದ್ದಾರೆ. ಇದಕ್ಕೆ ಮಾಹಿತಿ ಅಧಿಕಾರಿಗಳು ಕೆಲಸ ಹೆಚ್ಚಿದಂತೆ ಹೆಚ್ಚು ಸಿಬ್ಬಂದಿಗಳನ್ನು ನೇಮಕಾತಿ ಮಾಡಿಲ್ಲವೆಂದ ಸಮಂಜಸ ಉತ್ತರ ನೀಡಿದ್ದಾರೆ. ಬಹುತೇಕ ರಾಜ್ಯಗಳಲ್ಲಿ ಅನೇಕ ಅರ್ಜಿಗಳು ಸುಮಾರು 1 ವರ್ಷದವರೆಗೂ ಇತ್ಯರ್ಥವಾಗದೇ ಇರುವುದರಿಂದ ಅಪೀಲು ಹೋಗಲು ಅರ್ಜಿದಾರರು ಮುಂದೆ ಬರುತ್ತಿಲ್ಲ. ವ್ಯಕ್ತಿಗಳ ಹಾಜರಾತಿಗೆ ಸಮನ್ಸ್ ನೀಡಬಹುದು ಎಂಬ ವಿಚಾರಕ್ಕೆ ಸಂಬಂಧಿಸಿದಂತೆ, 18ನೇ ಮಾಚ್, 2018ರ ಭಾನುವಾರದ ವಿಜಯವಾಣಿ ದಿನಪತ್ರಿಕೆಯಲ್ಲಿ ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಪ್ರವೀಣ್ಕುಮಾರ್ ಎಂಬ ಅರ್ಜಿದಾರರು ಮಾಹಿತಿ ಕೇಳಿದ್ದಕ್ಕೆ, ಅರ್ಜಿ ಸಲ್ಲಿಸಿದವರನ್ನೇ ವಿಚಾರಣೆಗೆ ಹಾಜರಾಗುವಂತೆ ನೋಟೀಸ್ ನೀಡಲಾಗಿದೆ.

ಪ್ರಜಾಪ್ರಭುತ್ವವನ್ನು ಅರ್ಥಪೂರ್ಣವಾಗಿ ಮಾಡಲು ಹಾಗೂ ಸರ್ಕಾರದ ಆಡಳಿತದಲ್ಲಿ ಜನರ ಭಾಗವಹಿಸುವುದರ ಜೊತೆಗೆ, ಆಡಳಿತವನ್ನು ಪಾರದರ್ಶಕತೆ ಕಡೆಗೆ ಕರೆದೊಯ್ಯಲು ಪ್ರಜೆಗಳಿಗೆ ಇರುವ ಆಯುಧವೆಂದರೆ ಮಾಹಿತಿ ಹಕ್ಕು. ಮಾಹಿತಿ ಹಕ್ಕು ಕಾಯ್ದೆ ಅನುಷ್ಠಾನದಲ್ಲಿ ಅನೇಕ ಸಮಸ್ಯೆಗಳಿದ್ದರೂ ಅದರ ಅವಶ್ಯಕತೆ ಮತ್ತು ಜನಪ್ರಿಯತೆ ಹೆಚ್ಚುತ್ತಿದೆ. ಪ್ರಜೆಗಳ ಕಾನೂನಿಗೆ, ಆತ್ಮಸಾಕ್ಷಿಗೆ ಅಂಜದ ಭ್ರಷ್ಟರು ಮಾಹಿತಿ ಹಕ್ಕು ಕಾಯ್ದೆಗೆ ಹೆದರಲೇಬೇಕಾಗುತ್ತದೆ. ಕಾಯ್ದೆಯ ಮಹತ್ವವನ್ನು ಇನ್ನೂ ಹೆಚ್ಚಿಸಲು ಮತ್ತು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಶಿಕ್ಷಣ ಸಂಸ್ಥೆಗಳಲ್ಲಿ, ಸರ್ಕಾರಿ ಕಛೇರಿಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಅರಿವು ಕಾರ್ಯಕ್ರಮಗಳನ್ನು ನಡೆಸಬೇಕು. ಅಲ್ಲದೆ ಪ್ರಜೆಗಳು ಇದರ ಅನುಷ್ಠಾನದಲ್ಲಿ ಹೆಚ್ಚು ಭಾಗಿಯಾಗುವಂತೆ ಮಾಡಬೇಕು.

**ಅಡಿ ಟಿಪ್ಪಣಿಗಳು:**


1. ಮಾಹಿತಿ ಹಕ್ಕು ಕಾಯ್ದೆ-2005 , ಭಾರತದ ಗೆಜೆಟ್ ಪ್ರಕಟಣೆ ಜೂನ್ 21, 2005.
2. ಕರ್ನಾಟಕ ಮಾಹಿತಿ ಹಕ್ಕು ಕಾಯ್ದೆ -2000, ಓದುಗರ ಕೈಪಿಡಿ.
3. ವಿಜಯವಾಣಿ ದಿನ ಪತ್ರಿಕೆ, ಭಾನುವಾರ, 18-03-2018, ಪುಟ ಸಂಖ್ಯೆ – 7ಬಿ.
4. Satpal Pulani – The Right to Information Act-2005, Bangalore, Karnataka Law Journal Publication
5. The Times of India September 14, 2012.
6. Annual, Ministry of Information and Broadcasting, Govt, of India, New Delhi.
7. J.N. Barowalia, Commentary on the Right to Information Act, Delhi, Univesal Law Publishing
    a. Company Pvt. Ltd., 2012.
8. The Times of India April 30th 2014.